# ಯಂಗ್ ಮದರ್ಸ್

ಬೆಂಗಳೂರಿನಲ್ಲಿ ನಡೆದ 17ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನೋಡಿದ 'ಯಂಗ್ ಮದರ್ಸ್' ಬಹಳ ಕಾಡುತ್ತಿದೆ. ಜೀನ್ ಪಿಯರ್ ಡಾರ್ಡೆನ್ ಮತ್ತು ಲುಕ್ ಡಾರ್ಡೆನ್ ಸಹೋದರರು ನಿರ್ದೇಶಿಸಿದ್ದಾರೆ. 2025ರ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು 'ಅತ್ಯುತ್ತಮ ಚಿತ್ರಕಥೆ' ಪ್ರಶಸ್ತಿಯನ್ನು ಪಡೆದುಕೊಂಡಿದೆ. ಹದಿಹರೆಯದ ಹುಡುಗಿಯರ ಮಾತೃತ್ವದ ಸಮಸ್ಯೆಯನ್ನು ಕುರಿತು ಈ ಚಿತ್ರ ಗಮನ ಸೆಳೆಯುತ್ತದೆ. 14– 16 ವಯೋಮಾನದೊಳಗಿನ ಕಿಶೋರಿಯರ ಮನೋದೈಹಿಕ ವರ್ತನೆಗಳು, ಸಮಾಜದಲ್ಲಿ ಅವರ ಸ್ಥಾನಮಾನ, ಬದುಕಲು ಹೆಣಗುತ್ತಿರುವ ಅವರ ಸಂಘರ್ಷ ಇತ್ಯಾದಿಗಳನ್ನು ಕೇಂದ್ರೀಕರಿಸಿಕೊಂಡು ಈ ಚಿತ್ರ ತೆಗೆಯಲಾಗಿದೆ.

ಬೆಲ್ಜಿಯಂನ ಬ್ಯಾನೂಕ್ಸ್ ಎಂಬಲ್ಲಿರುವ ಬಾಣಂತಿ ಆಶ್ರಯ ಮನೆಯಲ್ಲಿರುವ ಐದು ಬಡ ಹದಿಹರೆಯದ ತಾಯಂದಿರ ಸಂಕಟಗಳನ್ನು ತೋರಿಸಲಾಗಿದೆ. ಜೆಸ್ಸಿಕಾ ಹುಟ್ಟುವಾಗಲೇ ತಾಯಿಯಿಂದ ತ್ಯಜಿಸಲ್ಪಟ್ಟು ಅನಾಥಾಶ್ರಮದಲ್ಲಿಯೆ ಬೆಳೆದು ಜೈವಿಕ ತಾಯಿಯನ್ನು ಹುಡುಕಾಡುತ್ತಿರುವಾಗಲೆ 15ನೇ ವಯಸ್ಸಿನಲ್ಲಿಯೆ ಗರ್ಭಿಣಿಯಾಗಿರುತ್ತಾಳೆ. ತನ್ನ ಹೆತ್ತವಳಂತೆ ತಾನು ಕ್ರೂರಿಯಾಗಬಾರದು. ತನ್ನಂತೆ ತನ್ನ ಮಗುವು ಬೀದಿಪಾಲಾಗಬಾರದೆಂದು ಒದ್ದಾಡುತ್ತಿರುತ್ತಾಳೆ. ಹೆತ್ತವಳನ್ನು ಪತ್ತೆ ಹಚ್ಚಿ ಅದೇಕೆ ತನ್ನನ್ನು ಎಸೆದು ಹೋದೆ? ಹಸುಳೆಯನ್ನು ಬೀದಿಗೆ ಎಸೆದು ಹೋಗುವಾಗ ನಿನಗೆ ಏನೂ ಅನಿಸಲಿಲ್ಲವೆ? ಎಂದು ಕೇಳುತ್ತ ಉತ್ತರಕ್ಕಾಗಿ ಮತ್ತೆ ಮತ್ತೆ ಸತಾಯಿಸುತ್ತಾಳೆ. ಅವಳಮ್ಮನಾದರೊ ಹದಿಹರೆಯದಲ್ಲಿಯೆ ಹೆತ್ತ ಮಗುವನ್ನು ತೊರೆಯದಿದ್ದರೆ ತನಗೆ ಬದುಕು ಸಿಗುತ್ತಿರಲಿಲ್ಲ. ಬಹಳ ಕಷ್ಟಪಟ್ಟು ಇದೀಗ ನೆಮ್ಮದಿ ಜೀವನ ಪಡೆದುಕೊಂಡಿರುವುದರಿಂದ ತನ್ನ ತಂಟೆಗೆ ಬರಬಾರದೆಂದು ಮಗಳನ್ನು ದಬಾಯಿಸುತ್ತಾಳೆ.

ಪೆರ್ಲಾ ಎಂಬ ಕಿಶೋರಿ ಮಾತೃತ್ವ ಅರಿವಾಗುವ ಮೊದಲೆ ಗರ್ಭಿಣಿಯಾಗಿದ್ದಾಳೆ. ಆಕೆಯ ಸಂಗಾತಿ ಅಪರಾಧಿ. ಆತನ ಬಿಡುಗಡೆಯ ನಿರೀಕ್ಷೆಯಲ್ಲಿರುವ ಪೆರ್ಲಾ ಶಿಶುವಿನೊಂದಿಗೆ ಹೊಸ ಬಾಳನ್ನು ಹೂಡಲು ತವಕಿಸುತ್ತಾಳೆ. ಧೂರ್ತನಾದ ರಾಬಿನ್ ಯಾವತ್ತಿಗೂ ಸಂಸಾರ ಹೂಡಲು ಉತ್ಸುಕನಾಗದೆ ಅವಳಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾನೆ.

ಇನ್ನೊಬ್ಬ ಹದಿವಯಸ್ಸಿನ ತಾಯಿ ಜೂಲಿ. ಮಾದಕ ವ್ಯಸನಿ. ಸಂಗಾತಿ ಡೈಲನ್ ಕೂಡ. ವ್ಯಸನಮುಕ್ತರಾಗಿ ಸ್ವಚ್ಛ ಬಾಳನ್ನು ಕಟ್ಟಿಕೊಳ್ಳಲು ಬಯಸುತ್ತಾರಾದರೂ ಬಡತನ ಅವರನ್ನು ಹಣಿಯುತ್ತದೆ. ಅವರ ಪಡಿಪಾಟಲು ಮನಕರಗಿಸುತ್ತದೆ.

ಇನ್ನೊಬ್ಬ ತಾಯಿ ಅರಿಯೆನಾ. ಈಕೆ ತನ್ನ ಮಾದಕ ವ್ಯಸನಿ ತಾಯಿಯಿಂದ ತನ್ನ ಮಗುವನ್ನು ಉಳಿಸಿಕೊಳ್ಳಲು ಹೋರಾಡುತ್ತಾಳೆ. ಅರಿಯೆನಾಳ ಜೈವಿಕ ತಾಯಿ ಮೊದಲ ಪತಿಯನ್ನು ತೊರೆದು ತನ್ನ ವ್ಯಸನದ ಕಾರಣಕ್ಕಾಗಿ ಕ್ರೂರಿಯೂ ವ್ಯಸನಿಯೂ ಆದ ಇನ್ನೊಬ್ಬನೊಂದಿಗೆ ಬದುಕು ಕಟ್ಟಿಕೊಳ್ಳಲು ಹೆಣಗಾಡುತ್ತಿದ್ದಾಳೆ. ಮಗಳನ್ನು ಬೆಳೆಸುವಲ್ಲಿ ತೋರಿದ ನಿರ್ಲಕ್ಷ್ಯ ಪಾಪ ಭೀತಿಯಿಂದ ಹೊರಬರಲು ಮೊಮ್ಮಗುವನ್ನಾದರೂ ಚೆನ್ನಾಗಿ ಸಲಹಿ ಋಣ ತೀರಿಸಿಕೊಳ್ಳಲು ಬಯಸುತ್ತಾಳೆ. ಅರಿಯೆನಾ ಮೃದು ಹೃದಯಿಗಳಾದ ದಂಪತಿಗಳಿಗೆ ತನ್ನ ಮಗುವನ್ನು ದತ್ತು ಕೊಡಲು ಬಯಸುತ್ತಾಳೆ. ದತ್ತು ಪಡೆಯಲಿರುವ ದಂಪತಿಗಳಿಗೆ ತನ್ನ ಮಗುವಿಗೆ ಸಂಗತಿ ಕಲಿಸಬೇಕೆಂದು ಷರತ್ತು ವಿಧಿಸುವುದಲ್ಲದೆ, ಮಗುವಿಗೆ 18 ವರ್ಷಗಳು ಆದಾಗ ತಾನು ಬರೆದ ಪತ್ರ ತೋರಿಸಬೇಕೆಂದು ಲಕೋಟೆ ನೀಡುತ್ತಾಳೆ.

ಐದನೇ ತಾಯಿ ನೈಮಾ ರೈಲು ಕಂಡಕ್ಟರ್ ಆಗಲು ಬಯಸಿ ಮಗುವಿನೊಂದಿಗೆ ತನ್ನ ಕರಿಯರ್ ಮಾಡಿಕೊಳ್ಳಲು ಬಡಿದಾಡುತ್ತಾಳೆ. ಈ ಎಲ್ಲ ತಾಯಂದಿರು ಎಳಸು ಮಾತ್ರವಲ್ಲದೆ ಮಾತೃತ್ವಕ್ಕೆ ಬೇಕಾದ ದೈಹಿಕ, ಮಾನಸಿಕ ಸಿದ್ಧತೆಯಿಲ್ಲದೆ ಒದ್ದಾಡುವವರೆ. ಹೆರಿಗೆ ನೋವು ಕಾಣಿಸಿಕೊಳ್ಳುವಾಗ ಯಾವ ಉಡುಪು ಧರಿಸಬೇಕೆಂಬ ಕನಿಷ್ಠ ಅರಿವಿರದ ಮತ್ತು ಯಾರದೆ ಆಶ್ರಯ, ಆರೈಕೆಗಳಿಲ್ಲದ ಬಡ ಅನಾಥೆಯರು. ಮಗುವಿಗೆ ಹಾಲೂಡಿಸುವುದು, ಡೈಪರ್ ಹಾಕುವುದು, ಸ್ನಾನ ಮಾಡಿಸುವುದು, ಮಲಗಿಸುವುದು ಹೀಗೆ ಶಿಶು ಪಾಲನೆಯ ಕಿಂಚಿತ್ತೂ ಜ್ಞಾನವಿರದ ಇವರು ಪಡುವ ಪಾಡನ್ನು ಚಿತ್ರ ಹೃದಯಸ್ಪರ್ಶಿಯಾಗಿ ಹಿಡಿದಿಟ್ಟಿದೆ.

ಇಡೀ ಚಿತ್ರದಲ್ಲಿ ಮಗುವಿನ ಜನನಕ್ಕೆ ಕಾರಣವಾದ ಗಂಡಸಿನ ಜವಾಬ್ದಾರಿ ಎಲ್ಲಿಯೂ ತೋರಿಸುವುದಿಲ್ಲ. ಒಬ್ಬ ಗಂಡಸು ಮಾತ್ರ ತನ್ನ ಪ್ರೇಯಸಿಯೊಂದಿಗೆ ಮಗುವಿಗಾಗಿ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಮುಂದಾಗುವುದು ಬಿಟ್ಟರೆ ಉಳಿದ ಗಂಡಸರ ಸುಳಿವೆ ಚಿತ್ರದಲ್ಲಿ ಇಲ್ಲ. ಇನ್ನೊಬ್ಬ ಬಾಲಾಪರಾಧಿ ಗಂಡಸಂತೂ ಸಂಗಾತಿ ಎಷ್ಟೆಲ್ಲಾ ಗೋಗರೆದರೂ ನಿಷ್ಕರುಣೆಯಾಗಿ ಆಕೆಯನ್ನು ತೊರೆದು ಹೋಗುತ್ತಾನೆ. ಪೋಷಣೆಯಲ್ಲಿ ಗಂಡಸಿನ ಜವಾಬ್ದಾರಿ ಅಪೇಕ್ಷಣೀಯ ಅಲ್ಲವೆ? ತಾಯ್ತನದ ದೈಹಿಕ ಸಂಕಷ್ಟ, ಮಾನಸಿಕ ತಾಕಲಾಟ, ಸಾಮಾಜಿಕ ನಿರ್ಬಂಧನೆ ಇವುಗಳೆಲ್ಲವೂ ಕೇವಲ ಹೆಣ್ಣು ಮಾತ್ರ ನಿರ್ವಹಿಸಬೇಕಾದ ಹೊಣೆಗಾರಿಕೆಯೆ? ತಂದೆತನ ಎಂಬುದರ ಅರ್ಥವಾದರೂ ಏನು? ಬಸುರಿ ಮಹಿಳೆಯರ ಜೈವಿಕ ಸಂಗತಿಗಳು. ಆದರೆ ಅವಳ ನೋವಿನಲ್ಲಿ ಮಾನಸಿಕವಾಗಿ ಪಾಲ್ಗೊಳ್ಳುವ ಆರ್ದ್ರತೆಯಾದರೂ ಗಂಡಸಿನಲ್ಲಿ ಇರಬಾರದೆ? ಈ ಹಂತದಲ್ಲಿ ಗಂಡ ಎನಿಸಿಕೊಂಡ ಪ್ರಾಣಿಯ ನೈತಿಕ ಹೊಣೆಗಾರಿಕೆ ಅಪೇಕ್ಷಿಸಬಾರದೆ?

ಹರೆಯದ ಹುಡುಗಿಯರು ಅದೇಕೆ ತಿಳಿದೂ ತಿಳಿಯದೆ ತಾಯ್ತನದ ರಿಸ್ಕ್ ತೆಗೆದುಕೊಳ್ಳಲು ಮುಂದಾಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹುಡುಗಿಯರ ಋತುಮತಿಯಾಗುವ ವಯಸ್ಸು ಒಂಬತ್ತರಿಂದಲೇ ಕಾಣಿಸಿಕೊಳ್ಳುತ್ತಿದೆ. ಹಾರ್ಮೋನುಗಳ ಬದಲಾವಣೆಗಳು ಕಾಣಿಸಿಕೊಳ್ಳುತ್ತಿವೆಯಂತೆ. ಅದರೊಂದಿಗೆ ಜಾಗತೀಕರಣದ ಹೊಸ ಆರ್ಥಿಕ ನೀತಿಗಳು ಮತ್ತು ಅವುಗಳ ಪ್ರತಿಫಲನಗಳಾದ ಆಧುನಿಕೋತ್ತರ ಮಾರುಕಟ್ಟೆ, ಶರವೇಗದಲ್ಲಿರುವ ತಂತ್ರಜ್ಞಾನ, ಐಟಿ, ಬಿಟಿ, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಆನ್‌ಲೈನ್ ಆಟ ಪಾಠಗಳು ಒಟ್ಟಾರೆ ಇವೆಲ್ಲವೂ ಮಾನವ ಬದುಕಿನ ವಿನ್ಯಾಸಗಳನ್ನು ಪಲ್ಲಟಗೊಳಿಸಿವೆ. ಅದರ ನೇರ ಪರಿಣಾಮ ಮಹಿಳೆಯರನ್ನು ಬಾಧಿಸುತ್ತಿದೆ. ಪ್ರಕೃತಿ ಸಹಜವೆನಿಸಿರುವ ತಾಯ್ತನವು ಅದೆಷ್ಟು ರಿಸ್ಕ್‌ನಿಂದ ಕೂಡಿದೆ ಮತ್ತು ಅದಕ್ಕಾಗಿ ಮಹಿಳೆಯರು ತೆರುತ್ತಿರುವ ಬೆಲೆ ಎಷ್ಟು ಭಯಂಕರವಾಗಿದೆ ಎಂಬುದನ್ನು ಅರಿವಾಗಿಸುವಲ್ಲಿ 'ಯಂಗ್ ಮದರ್ಸ್' ಚಿತ್ರ ಸಕ್ಷಮವಾಗಿದೆ. ಇಂಥ ಗಂಭೀರ ಚಿತ್ರಗಳನ್ನು ತೆಗೆಯುವಲ್ಲಿ ಡಾರ್ಡೆನ್ ಸಹೋದರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ತಾನು ಎಲ್ಲವನ್ನೂ ಬಲ್ಲೆನೆಂದು ತಿಳಿಯುವವನೆ ಮೂರ್ಖ.

  —ಮಹಾಭಾರತ
- ಅದೃಷ್ಟ ಎನ್ನುವುದು ಪ್ರಯತ್ನವೆಂಬ ತಾಯಿಗೆ, ಅವಕಾಶವೆಂಬ ತಂದೆಗೆ ಜನಿಸುವ ಮಗು.

  —ಗುರುನಾನಕ್
- ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ.

  —ಪೂರ್ಣಚಂದ್ರ ತೇಜಸ್ವಿ
- ಜಗತ್ತಿನ ದೊಡ್ಡ ಪ್ರಾರ್ಥನೆಯೆಂದರೆ ತಾಳ್ಮೆ.

  —ಗೌತಮ ಬುದ್ಧ
- ಹಣ ಎಂಬುದು ಉಪ್ಪಿನಂತೆ, ಕಡಿಮೆ ತಿಂದರೆ ರುಚಿ, ಹೆಚ್ಚು ತಿಂದರೆ ದಾಹ.

  —ಶಿವರಾಮ ಕಾರಂತ
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.

  —ಸಿ.ವಿ. ರಾಮನ್
- ನಿಮಗೆ ಪ್ರತಿಭೆ ಇದ್ದರೆ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇರಬೇಕಾಗುತ್ತದೆ.

  —ಜಿಮ್ ಕ್ಯಾರಿ
- ಬಾಳನ್ನು ಹಸನಾಗಿಸಿಕೊಳ್ಳಬೇಕು. ಪ್ರಹಸನವಾಗಿಸಿಕೊಳ್ಳಬಾರದು.

  —ಕೆ.ಎಸ್. ನಿಸಾರ್ ಅಹಮದ್
- ಲೋಪಗಳಿಂದಲೇ ದೊಡ್ಡವರು ರೂಪುಗೊಂಡಿದ್ದಾರೆ.

  —ಶೇಕ್ಸ್‌ಪಿಯರ್